1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Civil Misc.21/2023

PW- 01

ಪ್ರ. ಬೋ. ದಿನಾಂಕಃ 11-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಚನ್ನಬಸಪ್ಪ ಜಿ |
| ತಂದೆ/ಗಂಡನ ಹೆಸರು | : | ಫಕ್ಕಿರಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕುಣೆಬೆಳಕರೆ |

ಈ ದಿನ ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದಾಗಿರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ಶ್ರೀ. ಎಸ್.ಆರ್.ಎ ವಕೀಲರಿಂದ.

ನನ್ನ ಜಮೀನಿನ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು, ಅದನ್ನು ನಿಪಿ.1 ಎಂದು, ಕುಣೆಬೆಳಕೆರೆ ಗ್ರಾಮದ ರಿಜಿಸ್ಟ್ರಾರ್ ಮೌಲ್ಯ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ - ಎದುರುದಾರರ ಪರ ಶ್ರೀ ಎನ್ ಕೆ . ವಕೀಲರಿಂದ.

ನನ್ನದು ಖುಶ್ಕಿ ಜಮೀನು ಎನ್ನುವುದು ಸರಿ. ಆದರೆ ನಾನು ಭತ್ತ ಬೆಳೆಯುತ್ತಿದ್ದೇನೆ. ಆ ಮೊದಲು ಜೋಳ ಬೆಳೆಯುತ್ತಿದ್ದೆ. ವಿದ್ಯುತ್ ಲೈನ್ ಹಾಕುವಾಗ ನಾವು ಆಕ್ಷೇಪಣೆ ಮಾಡಿಲ್ಲ. ವಿದ್ಯುತ್ ಲೈನ್ ಹಾಕಿದಾಗ ನಾನು ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದೆ. ನನಗೆ ಬೆಳೆ ನಷ್ಟ ಪರಿಹಾರ ಕೊಟ್ಟಿಲ್ಲ. ಕಟಾವು ಮಾಡಿದ ಮೇಲೆ ವಿದ್ಯುತ್ ಲೈನ್ ಹಾಕಿದ್ದಾರೆ. ನನಗೆ ಇಲ್ಲಿಯವರೆಗೂ ಯಾವುದೇ ಪರಿಹಾರ ಕೊಟ್ಟಿರುವುದಿಲ್ಲ. ಈ ಅರ್ಜಿಯನ್ನು ಕಾಲ ವಿಳಂಬ ಮಾಡಿ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ. ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎನ್ನುವುದು ಸರಿಯಲ್ಲ. ಪರಿಹಾರ ಬೇಕು ಎಂದು ಎದುರುದಾರರ ಇಲಾಖೆಗೆ ಅರ್ಜಿ ಸಲ್ಲಿಸಿಲ್ಲ. ನನ್ನ ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆದಿರುವ ಬಗ್ಗೆ ಯಾವುದೇ ಸರ್ವೆ ಮಾಡಿಸಿಲ್ಲ. ದಿ.31-03-2010 ಕ್ಕೆ ವಿದ್ಯುತ್ ಕಾಮಗಾರಿ ಮುಗಿದೆ ಎನ್ನುವುದು ಸರಿ. ಮೂರು ಲಕ್ಷ ಬೆಳೆ ನಷ್ಟವಾಗಿದೆ ಎನ್ನುವ ಬಗ್ಗೆ ದಾಖಲೆ

ಹಾಜರುಪಡಿಸಿಲ್ಲ. ಬೆಳೆ ನಷ್ಟವಾಗಿಲ್ಲ ಎನ್ನುವುದು ಸರಿಯಲ್ಲ. ಲೈನ್ ಎಳೆಯುವ ಸಂದರ್ಭದಲ್ಲಿ ಯಾವುದೇ ಬೆಳೆ ನಷ್ಟವಾಗಿಲ್ಲ. ಭೂಮಿಯ ಮೌಲ್ಯ ಇಪ್ಪತ್ತು ಲಕ್ಷ ಕಡಿಮೆಯಾಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಲೈನ್ ಕೆಳಗಡೆ ಮೆಕ್ಕೆ ಜೋಳ ಬೆಳೆಯಲು ತೊಂದರೆ ಇಲ್ಲ ಎನ್ನುವುದು ಸರಿ. ಎಷ್ಟು ವಿಸ್ತೀರ್ಣದಲ್ಲಿ ವಿದ್ಯುತ್ ತಂತಿ ಹಾಕಲಾಗಿದೆ ಎನ್ನುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ದಾಖಲೆ ಪಡೆದಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಿಲ್ಲ. ವಿದ್ಯುತ್ ಲೈನ್ ಹಾಕಿರುವುದರಿಂದ ನನಗೆ ಅನುಕೂಲವಾಗಿದೆ ಎನ್ನುವುದು ಸರಿಯಲ್ಲ. ಸಬ್ ರಜಿಸ್ಟರ್ ಕಛೇರಿಯಿಂದ ಭೂಮಿ ಮೌಲ್ಯದ ನಷ್ಟದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಪರಿಹಾರ ಪಡೆಯಲು ಕಾಲವಿಳಂಬವಾಗಿರುವುದರಿಂದ ಪರಿಹಾರ ಪಡೆಯಲು ಅರ್ಹನಲ್ಲ ಎನ್ನುವುದು ಸರಿಯಲ್ಲ. ಪರಿಹಾರ ಪಡೆಯುವ ದುರುದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ , ಸುಳ್ಳು ಮುಖ್ಯ ವಿಚಾರಣೆ ಸಲ್ಲಿಸಿ , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.